# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 395 |
| ಸದಸ್ಯರ ಹೆಸರು | : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 11.12.2024 |
| ಉತ್ತರಿಸಿಸುವ ಸಚಿವರು | : ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಉತ್ತರ ಕನ್ನಡ ಜಿಲ್ಲೆಯಲ್ಲಿ ದಾಂಡೇಲಿ ತಾಲ್ಲೂಕಿನ ಆಲೂರು ಪಂಚಾಯತಿಯ ವ್ಯಾಪ್ತಿಯ ನಾನಾಕೆಸರೊಡಗಾ ಗ್ರಾಮದಿಂದ ಬರ್ಚಿವರೆಗಿನ ಜಿಲ್ಲಾ ಮುಖ್ಯ ರಸ್ತೆಯು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ: | ಉತ್ತರ ಕನ್ನಡ ಜಿಲ್ಲೆಯಲ್ಲಿ ದಾಂಡೇಲಿ ತಾಲ್ಲೂಕಿನ ಆಲೂರು ಪಂಚಾಯತಿಯ ವ್ಯಾಪ್ತಿಯ ನಾನಾಕೆಸರೊಡಗಾ ಗ್ರಾಮದಿಂದ ಬರ್ಚಿವರೆಗಿನ ರಸ್ತೆಯು ತಾವರಗಟ್ಟಿ ದಾಂಡೇಲಿ ಪಾಟೋಲಿ ವರೆಗಿನ ರಸ್ತೆಯು ಕಿ.ಮೀ 6.50 ರಿಂದ 15.60 ರವರೆಗಿನ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹಾಳಾದ ರಸ್ತೆಯನ್ನು ವಾರ್ಷಿಕ ನಿರ್ವಹಣೆ ಅಡಿ ತುರ್ತಾಗಿ ಸದರಿ ರಸ್ತೆಗೆ ಖಡೀಕರಣ ಮಾಡಿ, ತಗ್ಗು ಗುಂಡಿಗಳನ್ನು ತುಂಬಿ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ಮತ್ತು ದಿನಗೂಲಿ ಕೆಲಸಗಾರರಿಗೆ ಪ್ರತಿನಿತ್ಯ ಸಂಚರಿಸಲು ಅನುಕೂಲ ಮಾಡಿ ಕೊಡಲಾಗಿರುತ್ತದೆ. |
| ಆ) | ಸಂಪೂರ್ಣ ಅರಣ್ಯದೊಳಗಿರುವ ಸದರಿ ರಸ್ತೆ ಹಾಳಾದ ಕಾರಣ ಈ ಮಾರ್ಗವಾಗಿ ಸಂಚರಿಸುವ ಬಸ್ ತಡವಾಗಿ ತಲುಪುತ್ತಿರುವುದರಿಂದ ನೂರಾರು ಶಾಲಾ ಕಾಲೇಜು ಮಕ್ಕಳಿಗೆ ಮತ್ತು ದಿನಗೂಲಿ ಕೆಲಸಗಾರರಿಗೆ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗದೇ ಪ್ರತಿನಿತ್ಯ ಸಮಸ್ಯೆ ಉಂಟಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ: | |
| ಇ) | ಸರ್ಕಾರವು ಆದ್ಯತೆಯ ಮೇರೆಗೆ ಸದರಿ ರಸ್ತೆಯನ್ನು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ತೆಗೆದುಕೊಳ್ಳುವ ಮುಂದಿನ ಕ್ರಮಗಳಾವುವು? | ತಾವರಗಟ್ಟಿ ದಾಂಡೇಲಿ ಪಾಟೋಲಿ ರಸ್ತೆ ಕಿ.ಮೀ 6.50 (ನಾನಾಕೆಸರೊಡಗಾ) ದಿಂದ ಕಿ.ಮೀ 13.00 (ಗೋಬ್ರಾಳ) ರವರೆಗೆ ರಸ್ತೆ ಸುಧಾರಣೆ ಪ್ರಸ್ತುತ ಈ ಭಾಗದಲ್ಲಿ ವಾರ್ಷಿಕ ನಿರ್ವಹಣೆ ಕಾಮಗಾರಿ ಕೈಗೊಳ್ಳಲಾಗಿದೆ.<br><br>ತಾವರಗಟ್ಟಿ ದಾಂಡೇಲಿ ಪಾಟೋಲಿ ರಸ್ತೆ ಕಿ.ಮೀ 13.00 (ಗೋಬ್ರಾಳ) ದಿಂದ ಕಿ.ಮೀ 15.60 (ಬರ್ಚಿ) ರ ವರೆಗಿನ ರಸ್ತೆಯು 2023-24 ನೇ ಸಾಲಿನ ಅಪೆಂಡಿಕ್ಸ ಇ ಯೋಜನೆಯಡಿಯಲ್ಲಿ ರೂ.200.00 ಲಕ್ಷಗಳಿಗೆ ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ದಿನಾಂಕ:13.11.2024 ರಂದು ಪ್ರಾರಂಭಿಸಲಾಗಿದೆ. |

ಲೋಇ 46 ಸಿಕ್ಯೂಎನ್ 2024(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು